ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಬುಧವಾರ, ದಿನಾಂಕ: 17ನೇ ಜುಲೈ, 2019

ಮುಜರಾಯಿ ದೇವಾಲಯಗಳಿಗೆ ಬಂದ ಆದಾಯದ ವೆಚ್ಚದ ಬಗ್ಗೆ

ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

266 (316) ಮಾನ್ಯ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಪ್ರಸಿದ್ಧ ದೇವಾಲಯಗಳಾದ ಶ್ರೀ ಮಲೇಮಹದೇಶ್ವರ ದೇವಸ್ಥಾನ, ಮಹದೇಶ್ವರ ಬೆಟ್ಟ, ಶ್ರೀ ಸುಬ್ರಮಣ್ಯ ದೇವಾಲಯ, ಕುಕ್ಕೆ ಸುಬ್ರಮಣ್ಯ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಶ್ರೀ ಕಂಠೇಶ್ವರ ದೇವಾಲಯ, ನಂಜನಗೂಡು, ಮೈಸೂರು ಜಿಲ್ಲೆ ಇವುಗಳಿಗೆ ಕಳೆದ ಮೂರು ವರ್ಷಗಳಲ್ಲಿ ಎಲ್ಲಾ ಮೂಲಗಳಿಂದ ಬಂದ ಆದಾಯ ಎಷ್ಟು ; (ವಿವರ ನೀಡುವುದು)

(ಆ) ಈ ದೇವಾಲಯಗಳ ಅಭಿವೃದ್ಧಿಗೆ ಬಳಸಲಾದ ಹಣ ಎಷ್ಟು ; (ಕೆಲಸಗಳವಾರು ವಿವರ ನೀಡುವುದು)

(ಇ) ಈ ದೇವಾಲಯಗಳಿಗೆ ಬಂದ ಆದಾಯವು ಬಳಸಲಾದ ಹಣಕ್ಕಿಂತ ಹೆಚ್ಚಿದ್ದಲ್ಲಿ ಉಳಿಕೆ ಹಣವನ್ನು ಏನು ಮಾಡಲಾಗುತ್ತದೆ ? (ವಿವರ ನೀಡುವುದು)